ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಶುಕ್ರವಾರ ದಿನಾಂಕ ೨೩ನೇ ಮಾರ್ಚ್ ೧೯೯೦, ಚೈತ್ರ ೨ ೧೯೧೨ ಶಕ

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ ೯-೩೦ ಘಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಎಸ್. ಎಂ. ಕೃಷ್ಣ) ಪೀಠವನ್ನು ಅಲಂಕರಿಸಿದರು].

ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಚಾಲಕರ, ನಿರ್ವಾಹಕರ ಹಾಗೂ ಯಂತ್ರ ಕರ್ಮಿಗಳ ಹುದ್ದೆಗಳ ಭರ್ತಿ

೨೨೭. ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ (ಪಾಯಕೊಂಡ .—ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಖಾಲಿಯಿರುವ ಚಾಲಕ, ನಿರ್ವಾಹಕ ಮತ್ತು ತಾಂತ್ರಿಕ ಹುದ್ದೆಗಳ ಸಂಖ್ಯೆ ಎಷ್ಟು ?

ಆ) ಈ ಖಾಲಿಯಿರುವ ಹುದ್ದೆಗಳನ್ನು ಭರ್ತಿಮಾಡಲು ಕೈಗೊಂಡಿರುವ ಕ್ರಮಗಳೇನು ?

ಇ) ಬಳ್ಳಾರಿ ವಿಭಾಗದಲ್ಲಿ ನೇಮಕಾತಿಗಳನ್ನು ನಿಲ್ಲಿಸಲು ಕಾರಣವೇನು ? ಹಾಗೂ ಬಳ್ಳಾರಿ ವಿಭಾಗದ ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುತ್ತದೆ ?

ಶ್ರೀ ಕೆ. ಜೆ. ಜಾರ್ಜ್ (ಆಹಾರ, ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಮಂತ್ರಿಯವರು).—

ಅ)

ವರ್ಗ	ಖಾಲಿಯಿರುವ ಹುದ್ದೆಗಳು
ಚಾಲಕರು	ಇಲ್ಲ
ನಿರ್ವಾಹಕರು	ಇಲ್ಲ
ತಾಂತ್ರಿಕ	೩,೧೮೦

ಆ) ಮತ್ತು ಇ) ತಾಂತ್ರಿಕ ಸಿಬ್ಬಂದಿಗೆ ಸಂಬಂಧಿಸಿದಂತೆ ೧೫೨೦ ಹುದ್ದೆಗಳನ್ನು ಬಡ್ತಿಯಿಂದ ತುಂಬ ಬೇಕಾಗಿದ್ದು ಆ ರೀತಿ ತುಂಬಲು ಆದೇಶವನ್ನು ಹೊರಡಿಸಲಾಗುತ್ತಿದೆ. ತಾಂತ್ರಿಕ ಸಿಬ್ಬಂದಿ ಹುದ್ದೆಗಳನ್ನು ಪರಿಷ್ಕರಣೆ ಮಾಡಿ ಕಡಿಮೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಹುದ್ದೆಗಳಿಗೆ ನೇರ ನೇಮಕಾತಿ ಮಾಡುವುದನ್ನು ಸದ್ಯಕ್ಕೆ ಸ್ಥಗಿತಗೊಳಿಸಲಾಗಿದೆ.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.— ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು 'ಅ' ಪ್ರಶ್ನೆಗೆ ಉತ್ತರ ಕೊಡುತ್ತಾ ಚಾಲಕರು ಮತ್ತು ನಿರ್ವಾಹಕರ ಹುದ್ದೆಗಳು ಖಾಲಿ ಇಲ್ಲ ಎಂದು ಹೇಳಿದ್ದಾರೆ. ಇದು ಸತ್ಯಕ್ಕೆ ದೂರವಾಗಿರುವ ಮಾತು ಎಂದು ನಾನಗನ್ನಿಸುತ್ತದೆ. ಏಕೆಂದರೆ ಇತ್ತೀಚೆಗೆ ನಡೆದಂಥ ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿ ವಿಂಟಿಂಗ್‌ನಲ್ಲಿ ನಿಮ್ಮ ಇಲಾಖೆಯವರೇ

ಆ ವಿಷಯಕ್ಕೆ ಬಂದು ನಮಗೆ ಈ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಬಳ್ಳಾರಿ, ದಾವಣಗೆರೆ ಡಿಪೋನಲ್ಲಿ ಸಾಕಷ್ಟು ಬಸ್ಸ್ ಇದೆ ಅಂದರೆ ೧೩೨ ಬಸ್‌ಗಳಿದ್ದು ಡ್ರೈವರ್ ಮತ್ತು ಕಂಡಕ್ಟರ್ ಹುದ್ದೆಗಳು ೬೦ ಖಾಲಿ ಇವೆ ಮತ್ತು ಮೆಕಾನಿಕ್ಸ್ ೩೧ ಖಾಲಿ ಇತ್ತು, ಅದನ್ನು ಮಾತ್ರ ಫಿಲಪ್ ಮಾಡಿದ್ದಾರೆ ಎಂದು ತಿಳಿಸಿದ್ದಾರೆ. ಇಲ್ಲಿ ನೀವು ಇಲ್ಲ ಎಂದು ಹೇಳಿದ್ದೀರಿ. ಡೈಲಿವೇಜಸ್‌ನಲ್ಲಿ ಈ ೬೦-೬೦ ಪೋಸ್ಟ್‌ಗಳನ್ನು ಫಿಲಪ್ ಮಾಡಿದ್ದಾರೆ. ಅವರು ಒಂದು ದಿವಸ ಬಂದರೆ ೧೦ ದಿವಸ, ೨೦ ದಿವಸ ಕೆಲಸಕ್ಕೆ ಬರುವುದಿಲ್ಲ. ಆ ಹುದ್ದೆಗಳು ನಿಮ್ಮ ಅಂಕಿ ಅಂಶಗಳ ಪ್ರಕಾರ ಫಿಲಪ್ ಆಗಿದೆಯೆಂದಾಗಲಿ ತ್ತದೆ. ಆದರೆ ಅವರು ಮಾತ್ರ ಖಂಡಿತ ತಿಂಗಳಿಗೆ ೧೦ ದಿವಸ ಸಹ ಕೆಲಸಕ್ಕೆ ಬರುವುದಿಲ್ಲ. ಅದೂ ಅಲ್ಲದೆ ನಮ್ಮ ಬಳ್ಳಾರಿ ಡಿವಿಜನ್‌ನಲ್ಲಿ ಕಂಡಕ್ಟರ್ಸ್ ಮತ್ತು ಡ್ರೈವರ್ಸ್ ಪೋಸ್ಟ್‌ಗೆ ಅರ್ಜಿಗಳನ್ನು ಕರೆದು ಇಂಟರ್‌ವ್ಯೂ ಕಾರ್ಡ್ ಕಳಿಸಿ ಆಮೇಲೆ ಸ್ಟಾಪ್ ಮಾಡಿದ್ದಾರೆ. ಇದಕ್ಕೆ ಕಾರಣವೇನು ?

ಶ್ರೀ ಕೆ. ಜೆ. ಜಾರ್ಜ್.— ಮಾನ್ಯ ಅಧ್ಯಕ್ಷರೆ, ನಮ್ಮ ಕೆ. ಎಸ್. ಆರ್. ಟಿ. ಸಿ.ಯಲ್ಲಿ ಈಗಾಗಲೇ ೧೭,೧೨೮ ಡ್ರೈವರ್ಸ್ ಇದ್ದಾರೆ, ಇದರ ಲೆಕ್ಕದ ಪ್ರಕಾರ ೧೦೬೮ ಡ್ರೈವರ್ಸ್ ಎಕ್ಸಸ್ಟ್ರಾ ಬರುತ್ತಾರೆ ೧೭೦೩೫ ಕಂಡಕ್ಟರ್ಸ್ ಇದ್ದಾರೆ, ನಮ್ಮ ಲೆಕ್ಕದ ಪ್ರಕಾರ ೭೨೨ ಎಕ್ಸಸ್ಟ್ರಾ ಬರುತ್ತಾರೆ. ಕೆ.ಎಸ್.ಆರ್ ಟಿ.ಸಿ.ಯಂ ಸಂಪೂರ್ಣವಾದ ವಿವರ ಇದರಲ್ಲಿದೆ. ಮಾನ್ಯ ಸದಸ್ಯರು ಹೇಳಿದಹಾಗೆ ಏನಾದರೂ ಬಳ್ಳಾರಿ ಡಿವಿಜನ್‌ನಲ್ಲಿ ಈ ರೀತಿ ಕಡಿಮೆ ಬಂದಿದೆಯೆಂದರೆ ನಾನು ಅದನ್ನು ವಿಚಾರಿಸಿ ಪರಿಶೀಲನೆ ಮಾಡುತ್ತೇನೆ ಮತ್ತು ಬಳ್ಳಾರಿ ಡಿವಿಜನ್‌ಗೆ ಮಾತ್ರವಲ್ಲ ಇಡೀ ರಾಜ್ಯದಲ್ಲಿ ತಾತ್ಕಾಲಿಕವಾಗಿ ನಾವು ನೇಮಕಾತಿ ಸ್ಟಾಪ್ ಮಾಡಿಸಿದ್ದಾಗಿದೆ. ಏಕೆಂದರೆ ಹಲವಾರು ದೂರುಗಳು ಬಂದಿವೆ. ಆದರೆ ಬಗ್ಗೆ ವಿಚಾರ ಮಾಡಿ ಪರಿಶೀಲನೆ ಮಾಡುವುದಕ್ಕೆ ನಮ್ಮ ಕೆ. ಎಸ್. ಆರ್. ಟಿ. ಸಿ.ಗೆ ಆದೇಶ ಕೊಟ್ಟಿದ್ದೇನೆ. ಅವರ ಸಲಹೆ ಬಂದನಂತರ ಮತ್ತೆ ನೇಮಕಾತಿಯನ್ನು ಪ್ರಾರಂಭ ಮಾಡುತ್ತೇವೆ.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.— ಈಗ ಪ್ರಶ್ನೆ ಏನೆಂದರೆ ಬಸ್‌ಗಳು ಇವೆ, ನೇಮಕಾತಿ ಯನ್ನು ನೀವು ನಿಲ್ಲಿಸಿರುವುದರಿಂದ ಓಡಾಡಲಿಕ್ಕೆ ಜನರಿಗೆ ಬಹಳ ತೊಂದರೆ ಇದೆ. ಯಾವಾಗ ನೇಮಕಾತಿ ಯನ್ನು ಮಾಡಿ ಈ ಪೋಸ್ಟ್‌ಗಳನ್ನು ಫಿಲಪ್ ಮಾಡುತ್ತೀರಿ ?

ಶ್ರೀ ಕೆ. ಜೆ. ಜಾರ್ಜ್.— ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಹೇಳಿದ್ದೇನೆ. ನಮಗೆ ಡ್ರೈವರ್ಸ್ ಮತ್ತು ಕಂಡಕ್ಟರ್ಸ್ ಕೊರತೆ ಇಲ್ಲ. ಆದರೆ ಬಳ್ಳಾರಿ ಡಿವಿಜನ್‌ನಲ್ಲಿ ಏನಾದರೂ ಆ ರೀತಿ ಬಂದರೆ ನಾನು ವಿಚಾರಿಸಿಬಿಟ್ಟು ಆದಷ್ಟು ಬೇಗನೆ ಕ್ರಮ ತೆಗೆದುಕೊಳ್ಳುತ್ತೇನೆ. ಮತ್ತು ನೇಮಕಾತಿ ವಿಚಾರದಲ್ಲೂ ಸಹ...

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.— ನಾನು ಇಡೀ ಸ್ಟೇಟ್‌ಗೆ ಈ ಪ್ರಶ್ನೆಯನ್ನು ಕೇಳಿದ್ದೇನೆ. ಅದರಲ್ಲಿ ಬಳ್ಳಾರಿ ಡಿವಿಜನ್ ಕೂಡ ಸೇರುತ್ತಲ್ಲ.

ಶ್ರೀ ಕೆ. ಜೆ. ಜಾರ್ಜ್.— ಇಡೀ ಸ್ಟೇಟ್‌ನಲ್ಲಿ ಕೊರತೆ ಇಲ್ಲ. ಬಳ್ಳಾರಿ ಡಿವಿಜನ್ ಬಗ್ಗೆ ತಾವು ಈಗ ಹೇಳಿದಿರಿ, ಅದನ್ನು ನಾನು ವಿಚಾರ ಮಾಡುತ್ತೇನೆ.

ಶ್ರೀಮತಿ ಸಿ. ನಾಗಮ್ಮ ಕೇಶವಮೂರ್ತಿ.— ನಾನು ಕೇಳಿರುವ ಪ್ರಶ್ನೆ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಬಗ್ಗೆ ಕೇಳಿದ್ದೇನೆ. ಬಳ್ಳಾರಿ ಡಿವಿಜನ್ ಕೂಡ ಅದರಲ್ಲಿ ಸೇರುತ್ತದೆಯಲ್ಲವೇ ಅದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಕೆ. ಜೆ. ಜಾರ್ಜ್.— ರಾಜ್ಯ ಮಟ್ಟದಲ್ಲಿ ಕೊರತೆ ಇಲ್ಲ. ಬಳ್ಳಾರಿ ಡಿವಿಜನ್‌ನಲ್ಲಿ ಏನಾದರೂ ಆ ರೀತಿ ಕೊರತೆ ಇದ್ದರೆ ಈಗ ನನ್ನ ಗಮನಕ್ಕೆ ತಂದಿದ್ದೀರಿ, ಆದಷ್ಟು ಬೇಗನೆ ಆ ವಿಚಾರದಲ್ಲಿ ಪರಿಶೀಲನೆ ಮಾಡಿ ಬೇರೆ ಇನ್ನೂ ಯಾವುದಾದರೂ ಹೆಚ್ಚಿಗೆ ಇರಬಹುದು, ಹಾಗಿದ್ದರೆ ಅಲ್ಲಿಂದ ಜನರನ್ನು ಕಳಿಸಿಕೊಡುವಂಥ ವ್ಯವಸ್ಥೆ ಮಾಡುತ್ತೇನೆ. ಮತ್ತು ಆದಷ್ಟು ಬೇಗನೆ ನೇಮಕಾತಿ ವಿಚಾರದಲ್ಲಿ ತೀರ್ಮಾನ ತೆಗೆದು ಕೊಳ್ಳುತ್ತೇವೆ.